ಹೇಳ್ತಾರೆ, ಸದ್ಯಕ್ಕೆ ಆರಾಮವಾಗಿ ಮಲಗಿ...' ಎಂದು ಕುತೂಹಲವನ್ನು ಜೀವಂತವಾಗಿರಿಸಿ ನಡೆದುಹೋಗಿದ್ದ.

ಭಾಗ–7

ಕೊಠಡಿಯ ಬಾಗಿಲು ಮುಚ್ಚಿ ಹಾಸಿಗೆಯ ಮೇಲುರುಳಿದಾಗ ಹನ್ನೊಂದೂಕಾಲು ಗಂಟೆಯಾಗಿತ್ತು. ದೂರದಲ್ಲೆಲ್ಲೋ ಜೋರಾಗಿ ಮತ್ತು ದೀರ್ಘವಾಗಿ ಗುಡುಗುತ್ತಿರುವುದು ಸ್ಪಷ್ಟವಾಗಿ ಕೇಳಿಬರುತ್ತಿತ್ತು. ಬೆಳಿಗ್ಗೆಯಿಂದಲೂ ಉಷ್ಣಾಂಶ ಅಧಿಕವಾಗಿಯೇ ಇತ್ತು. ಮಳೆ ಬರುವ ಸೂಚನೆಯ ಬಗ್ಗೆ ಡಾಕ್ಟರ್ ಅರುಂಧತಿ ಪಿಳ್ಳೈ, ಭಗವಾನ್ ಕುಟ್ಟಿ ಇಬ್ಬರೂ ಹೇಳಿದ್ದ ಮಾತುಗಳು ನೆನಪಾದವು. ಅರುಂಧತಿ ಪಿಳ್ಳೈನೊಂದಿಗೆ ಪಡೆದ ನಿನ್ನೆ ರಾತ್ರಿಯ ಸುಖ ನೆನಪಾಗಿ ಅಂಥದ್ದೊಂದು ಘಟನೆ ಈಗಲೂ ಮರುಕಳಿಸಿದರೆ... ಎಂಬ ನಿರೀಕ್ಷೆ ಮನಸ್ಸಿನ ಆಳದಲ್ಲೆಲ್ಲೋ ಮೂಡಿತ್ತು. ಸಿಂಧು ಮೆನನ್ ದೆಹಲಿಗೆ ಹೋಗುವ ಕಾರ್ಯಕ್ರಮವಿಲ್ಲದಿದ್ದಲ್ಲಿ ಖಂಡಿತವಾಗಿಯೂ ಇಲ್ಲಿಗೆ ಬರುವವಳಿದ್ದಳು. ಅರುಂಧತಿ ಪಿಳ್ಳೈ ನಿನ್ನೆ ರಾತ್ರಿ ದೇಹ ಸುಖ ಹಂಚಿಕೊಳ್ಳುವಾಗ ಹೇಳಿದ್ದ ಕ್ಯಾನಿಬಾಲಿಸಂ ಕಾನ್ಸೆಪ್ಟ್ ಅದ್ಭುತ ಅನ್ನಿಸತೊಡಗಿತು. ಜೀವಜಗತ್ತಿನ ಎಲ್ಲಾ ಪ್ರಭೇದದ ಜೀವಿಗಳಲ್ಲೂ ದೈಹಿಕ ಸುಖ ಅನುಭವಿಸುವಾಗ ಗಂಡು ಹೆಣ್ಣುಗಳೆರಡೂ ಅತೀವ ಭಾವುಕತೆಯಿಂದ ಅತ್ಯಂತ ಒರಟಾಗಿ ವರ್ತಿಸುವುದು ನಿಜಕ್ಕೂ ವಿಸ್ಮಯವೇ ಸರಿ. ಪ್ರೀತಿ ಮತ್ತು ದ್ವೇಷ ಒಟ್ಟೊಟ್ಟಿಗೆ ಹುಟ್ಟುವುದು ಕಾಮದ ವಿಷಯದಲ್ಲಿ ಮಾತ್ರವೇ ಇರಬೇಕು. ಮನುಷ್ಯ ಹಸಿವಾದಾಗ ಆಹಾರಕ್ಕಾಗಿ ಹೆಚ್ಚು ಪರಿತಪಿಸುವುದಕ್ಕಿಂತ, ಕಾಮ ಜಾಗೃತವಾದಾಗಲೇ ಹೆಚ್ಚು ಪರಿತಪಿಸುವುದು ನಿರೂಪಿತವಾಗಿದೆ. ಈ ಆಲೋಚನೆಗಳೊಂದಿಗೆ ವಿಸ್ಕಿಯ ಅಮಲು ಬೆರೆತು ನನಗೆ ನಿದ್ದೆ ಆವರಿಸಿದ್ದೇ ಅರಿವಾಗಿರಲಿಲ್ಲ. ಏನೋ ಗಲಾಟೆಯೊಂದಿಗೆ ಬಾಗಿಲು ತಟ್ಟುವ ಸದ್ದು ಕೇಳಿ ಎಚ್ಚರವಾಗಿತ್ತು. ಗಾಬರಿಯಿಂದ ಎದ್ದು ಬಾಗಿಲು ತೆರೆದೆ. ಭಗವಾನ್ ಕುಟ್ಟಿ ಬ್ಯಾಟರಿ ಹಿಡಿದು ನಿಂತಿದ್ದ. ಕರೆಂಟು ಹೋಗಿರುವುದು ನನಗಾಗಲೇ ತಿಳಿದಿದ್ದು. ಹೊರಗೆ ಗುಡುಗು ಸಮೇತ ವಿಪರೀತವಾದ ಮಳೆ ಬರುತ್ತಿತ್ತು. ಅದರ ಜೊತೆಗೆ ಭರ್ ಎಂದು ರಭಸದಿಂದ ನೀರು ಹರಿಯುತ್ತಿರುವ ಸದ್ದು. ಮೊಬೈಲ್ ಫೋನಿನಲ್ಲಿ ಸಮಯ ಬೆಳಗಿನ ಜಾವ ನಾಲ್ಕೂವರೆಯನ್ನು ತೋರಿಸುತ್ತಿತ್ತು. ಮುಖದಲ್ಲಿ ಗಾಬರಿ ತುಂಬಿಕೊಂಡಿದ್ದ ಭಗವಾನ್ ಕುಟ್ಟಿ.

'ಕುಂಭದ್ರೋಣ ಮಳೆ. ಆಕಾಶದಿಂದ ನೂರಾರು ಜಲಪಾತಗಳು ಒಮ್ಮೆಲೇ ಉಂಟಾದಂತೆ ಅನ್ನಿಸುತ್ತಿದೆ. ಹೋದ ವರ್ಷ ಇದೇ ಸಮಯದಲ್ಲಿ ಇಂಥದ್ದೇ ಮಳೆಯಿಂದಾಗಿ ಐದುನೂರಕ್ಕೂ ಹೆಚ್ಚು ಜನ ಪ್ರವಾಹದಲ್ಲಿ ಮುಳುಗಿ ಹೋದ್ರು. ಚಂಗನೂರು, ಅಲೆಪ್ಪಿಗಳಂತೂ ಸ್ಮಶಾನಸದೃಶವಾಗಿದ್ದವು. ಇವೊತ್ತು ಇನ್ನೆಂಥ ಡ್ಯಾಮೇಜ್ ಆಗಿದೆಯೋ...' ಎಂದು ವಿಶಾಲವಾದ ನಡು ಮನೆಗೆ ನಡೆದ. ನಾನೂ ಭಯದಿಂದಲೇ ಭಗವಾನ್ ಕುಟ್ಟಿಯನ್ನು ಹಿಂಬಾಲಿಸಿದ್ದೆ. ಹಿಂದಿನ ವರ್ಷ ಇದೇ ತಿಂಗಳಲ್ಲಿ ಉಂಟಾಗಿದ್ದ ಭಯಂಕರ ಜಲಪ್ರಳಯವನ್ನು

## ಕಳೆದ ಸಂಚಿಕೆಯಲ್ಲಿ



ಎರ್ನಾಕುಲಂಕನಲ್ಲಿ 'ದಿ ಸ್ಕೂಲ್ ಆಫ್ ಚಾಲೆಂಜ್ ದಿ ಚಾಲೆಂಜ್'ಗೆ ಭೇಟಿಕೊಟ್ಟ ಕ್ರಾಂತಿ ರೆಡ್ಡಿಯ ಎದುರು ಹೊಸದೊಂದು ಲೋಕ ತೆರೆದುಕೊಂಡಿತು. ಅನಾಥ ಮಕ್ಕಳು, ನತದೃಷ್ಟ ಯುವತಿಯರು ಹಾಗೂ ಅಸಹಾಯಕ ವೃದ್ಧರು ಒಂದೆಡೆ ಬಾಳುವ ಆಶ್ರಮದ ರೀತಿಯ ಆ ಶಾಲೆ ಹಾಗೂ ಸುಧೀಂದ್ರ ನಯ್ಯಾರ್ ಅವರೊಂದಿಗಿನ ಮಾತುಕತೆ ಕ್ರಾಂತಿ ರೆಡ್ಡಿಯನ್ನು ಭಾವುಕನನ್ನಾಗಿಸಿದವು. ಎಂಡೋಸಲ್ಫಾನ್‌ನ ದುಷ್ಪರಿಣಾಮಗಳ ಬಗ್ಗೆಯೂ ಮಾತುಕತೆಯಾಯಿತು. ಆ ಶಾಲೆಯಿಂದ ಬೀಳ್ಕೊಂಡ ಕ್ರಾಂತಿಯನ್ನು ಕೆ.ಎಮ್. ನಯ್ಯಾರ್ ಅವರ ಆಗಮನದ ಸುದ್ದಿ ಸ್ವಾಗತಿಸಿತ್ತು. ನಯ್ಯಾರ್ ಅವರೊಂದಿಗಿನ ಭೇಟಿಯಲ್ಲೂ ಸುಖ ಸಂಪತ್ತು ಹಾಗೂ ದುಃಖದ ಚರ್ಚೆಯೇ.

ಟೀವಿಯಲ್ಲಿ ನೋಡಿದ್ದೆ. ಒಂದು ಕ್ಷಣ ಮೈ ಜುಂ ಎಂದಿತ್ತು. ನಡುಮನೆಯಲ್ಲಿ ಸುಮಾರು ಇಪ್ಪತ್ತೈದು ಜನ ಕುಳಿತಿದ್ದರು. ಬಹುಶಃ ತಗ್ಗಿನಲ್ಲಿದ್ದ ಲೇಬರ್ ಕ್ವಾರ್ಟರ್ಸ್‌ನವರಿರಬೇಕು. ವುಡನ್ ಚೇರ್ ಮೇಲೆ ಕೆ.ಎಮ್. ನಯ್ಯಾರ್ ಕುಳಿತಿದ್ದರು. ನನ್ನನ್ನು ನೋಡಿ ಪಕ್ಕದಲ್ಲಿನ ಚೇರ್ ಮೇಲೆ ಕುಳಿತುಕೊಳ್ಳುವಂತೆ ಸನ್ನೆ ಮಾಡಿದ್ದರು. ನಾನು ಕುಳಿತುಕೊಂಡೆ.

'ಅಯ್ಯಾ ಹೀಗೆ ಏನೋ ಒಂದು ಅನಾಹುತ ನಡೆಯುತ್ತದೆ ಅಂತ ನನಗೆ ಬಲವಾಗಿ ಅನ್ನಿಸ್ತಿತ್ತು. ಶಬರಿಮಲೆ ಸ್ವಾಮಿಗೆ ಖಂಡಿತವಾಗಿಯೂ ತುಂಬಾ ಕೋಪ ಬಂದಿದೆ. ಈ ತಿಂಗಳಿಂದಲೂ ಸ್ವಾಮಿಯ ನೆಮ್ಮದಿಯನ್ನೇ ಕೆಡಿಸಿಬಿಟ್ರು ಹಾಳಾದ ಜನ. ಅದ್ಯಾವುದೋ ಹೆಂಗಸು ಹೋಗಿ ಸ್ವಾಮಿಯ ಪಾದವನ್ನು ಮುಟ್ಟಬಹುದಾ? ತಲತಲಾಂತರಗಳಿಂದ ರೂಢಿಯಲ್ಲಿರುವ ನೇಮ ನಿಷ್ಠೆಗಳನ್ನು ಮುರಿಯಬಹುದಾ? ದೇವಳ ಪ್ರವೇಶ ಮಾಡಲು ಕೋರ್ಟ್ ಮೆಟ್ಟಿಲು ಏರಿದ ಸಂಗತಿ ಎಲ್ಲಾದರೂ ಕೇಳಿದ್ದೀರಾ? ಕೋರ್ಟಿಗೆ ಹೋದವರ ಕೊರಳು ಸೀಳದೆ ಬಿಡ್ತಾನ ಸ್ವಾಮಿ ಅಯ್ಯಪ್ಪ. ಅಂಥ ಪಾಪಿಗಳು ಮಾಡುವ ಹಲ್ಕಾ ಕೆಲಸಗಳಿಂದ ಬೇರೆಯವರಿಗೂ ಕೇಡುಂಟಾಗುತ್ತದಲ್ಲ...' ಸುಮಾರು ಐವತ್ತು ವರ್ಷ ವಯಸ್ಸಿನ ಹೆಣ್ಣು ಗಟ್ಟಿಯಾಗಿ ಹೇಳಿದ್ದಳು. ಆಕೆಯ ಕಣ್ಣುಗಳು ಕೋಪದಿಂದಲೋ ಅಥವಾ ನಿದ್ದೆಗೆಟ್ಟಿದ್ದರಿಂದಲೋ ಕೆಂಪಡರಿದ್ದವು.

'ಈ ಬಗ್ಗೆ ಚೀಫ್ ಮಿನಿಸ್ಟರ್ ಕೂಡಾ ಕಮಕ್ ಕಿಮಕ್ ಅನ್ನಲಿಲ್ಲ. ಈಗೀಗ ಅಧಿಕಾರ ದಾಹ ಧರ್ಮ ದೇವರುಗಳನ್ನೂ ಮರೆಸಿಬಿಟ್ಟಿದೆ...' ಭಗವಾನ್ ಕುಟ್ಟಿ ಆಕೆಯ ಮಾತುಗಳನ್ನು ಅನುಮೋದಿಸಿ ಮಾತನಾಡಿದ್ದ. 'ಪಾಪ ಮಾಡದವರನ್ನು ದೇವರು ಎಂದಿದ್ದರೂ ಕ್ಷಮಿಸುತ್ತಾನೆ...' ಕೆ. ಎಮ್. ನಯ್ಯಾರರ ಮುಂದೆ ನಿಂತಿದ್ದ ಎಪ್ಪತ್ತು ವರ್ಷದ ಮುದುಕರೊಬ್ಬರು ಮಾತು ಸೇರಿಸಿದ್ದರು. ಮೂವತ್ತು ವರ್ಷವಿರಬಹುದಾದ ಹೆಂಗಸೊಬ್ಬಳು ಟ್ರೇ ಒಂದರಲ್ಲಿ ಬಿಸಿಬಿಸಿ ಚಹಾ ತುಂಬಿದ ಗ್ಲಾಸುಗಳನ್ನಿಡಿದು ಬಂದು ಮೊದಲು ಕೆ.ಎಮ್. ನಯ್ಯಾರ್ ಮುಂದೆ ಹಿಡಿದಿದ್ದಳು. ನಯ್ಯಾರ್ ಒಂದು ಗ್ಲಾಸನ್ನು ನನಗೆ ಕೊಟ್ಟು ಮತ್ತೊಂದನ್ನು ತಾವು ತೆಗೆದುಕೊಂಡು ಕುಡಿಯಲಾರಂಭಿಸಿದರು.

'ಭಗವಾನ್ ವೆಳ್ಳಿಯಪ್ಪನ್ನ ಎಬ್ಬಿಸಿ ಚಹಾ ಕೊಡು...' ಎಂದಿದ್ದರು ಕೆ.ಎಮ್. ನಯ್ಯಾರ್. ಅವರ ಮಾತು ಕೇಳುತ್ತಿದ್ದಂತೆ ಮೂಲೆಯಲ್ಲಿ ದೀವಾನ್ ಮೇಲೆ ರಗ್ಗೊದ್ದು ಮಲಗಿದ್ದ ವಯಸ್ಸಾದ ವ್ಯಕ್ತಿಯೊಬ್ಬರು ಎದ್ದು ಕುಳಿತರು. ಪಂಚೆ ಬಿಟ್ಟರೆ ಅಂಗಿಯನ್ನಾಗಲೀ ಬನಿಯನ್ನಾಗಲೀ ಹಾಕಿರಲಿಲ್ಲ.

'ನಾನೇನು ನಿದ್ದೆ ಹೋಗಿರುವೆನೆಂದುಕೊಂಡೆಯಾ ನಯ್ಯಾರ್, ಕಿವಿಯಿಂದ ಜಲರಾಗವನ್ನು ಆಲಿಸುತ್ತಿದ್ದೆ...' ಎಂದು ಭಗವಾನ್ ಕುಟ್ಟಿ ಕೊಟ್ಟ ಚಹಾವನ್ನು ಒಮ್ಮೆ ಗುಟುಕರಿಸಿ, 'ರಭಸ ಕಡಿಮೆಯಾಗುತ್ತಿದೆ. ನಾವಂತೂ ಭಯಪಡುವ ಅಗತ್ಯವಿಲ್ಲ. ಆದರೆ ಜಲರಾಗವನ್ನು ಆಲಿಸುತ್ತಿದ್ದರೆ ಸ್ವಲ್ಪ ದೂರದಲ್ಲೆಲ್ಲೋ ಭಾರಿ ಅನಾಹುತವಾಗಿರುವಂತೆ ಅನ್ನಿಸುತ್ತಿದೆ...' ಎಂದವನ ಮಾತು ಕೇಳಿ ಅಲ್ಲಿ ನೆರೆದಿದ್ದವರ ಮುಖಗಳಲ್ಲಿ ಆತಂಕ ಕಡಿಮೆಯಾಗುತ್ತಿರುವುದು ಕಂಡು ಬಂದಿತ್ತು.

'ಇವ ವೆಳ್ಳಿಯಪ್ಪನ್, ನನ್ನ ಪ್ರೈಮರಿ ಸ್ಕೂಲ್ ಕ್ಲಾಸ್ಮೇಟ್. ನಾಲ್ಕನೇ ಕ್ಲಾಸಿಗೇ ಸಂಸ್ಕೃತ ಶ್ಲೋಕಗಳನ್ನು ಲೀಲಾಜಾಲವಾಗಿ ಹೇಳುತ್ತಿದ್ದ. ಆದರೆ ಇವ ಐದನೇ ಕ್ಲಾಸಿನಲ್ಲಿರುವಾಗಲೇ ಅರ್ಧಕ್ಕೆ ಸ್ಕೂಲು ಬಿಟ್ಟು ಇಡೀ ಕೇರಳವನ್ನು ಸುತ್ತತೊಡಗಿದ. ಅಲ್ಲಲ್ಲಿ ದೇವಳಗಳಲ್ಲಿ ಅದೂ ಇದೂ ಕೆಲಸ ಮಾಡಿಕೊಂಡು ಇದ್ದವನು ಕಡೆಗೆ ತ್ರಿಶ್ಯೂರ್ ಬಳಿಯ ಕಡಲಪ್ಪುರಂ ಹತ್ತಿರದ ಚೆಟ್ಟುವಾದಲ್ಲಿ ಖಂಡಕರ್ಣ ದೇವಳದಲ್ಲಿ ಒಂದು ವರ್ಷ ಪೂಜಾರಿಕೆಯನ್ನು ಮಾಡಿಕೊಂಡಿದ್ದವನು ಮೀನುಗಾರಿಕೆಗೆ ಇಳಿದುಬಿಟ್ಟ. ಫಿಶಿಂಗ್‌ನಲ್ಲಿ ದೊಡ್ಡ ಪಂಟರ್ ಎನ್ನಿಸಿಕೊಂಡುಬಿಟ್ಟ. ಬೇಕಾದಷ್ಟು ಮೆಷಿನ್ ಬೋಟುಗಳನ್ನು ಇಟ್ಟ. ಸಮುದ್ರದಲ್ಲಿ ದೂರದವರೆಗೆ ಹೋಗಿ ಫಿಶಿಂಗ್ ಮಾಡುವುದರಲ್ಲಿ ಕಡಲಪ್ಪುರಂನ ಸುತ್ತೆಂಟು ಊರುಗಳಲ್ಲಿ ಹೆಸರು ಮಾಡಿಬಿಟ್ಟ. ಆಗಲೇ ಇವನು ಅಲ್ಲಿರುವುದು ನಮಗೆ ತಿಳಿದಿದ್ದು. ಅಷ್ಟೊತ್ತಿಗಾಗಲೇ ವೆಳ್ಳಿಯಪ್ಪನ್ ಆರ್ಥಿಕವಾಗಿ, ಸಾಮಾಜಿಕವಾಗಿ ಎತ್ತರಕ್ಕೆ ಬೆಳೆದುಬಿಟ್ಟಿದ್ದ. ಎರಡು ಮದುವೆಯಾಗಿದ್ದ. ಆಗ ಸೀಗಡಿ ಮೀನಿಗೆ ಟ್ಯಾಕ್ಸ್ ಇತ್ತು. ವೆಳ್ಳಿಯಪ್ಪನ್ ಸೀಗಡಿ ಸ್ಮಗ್ಲಿಂಗ್ ಬಿಸಿನೆಸ್‌ನಲ್ಲಿ ಮುಂಚೂಣಿಯಲ್ಲಿದ್ದ. ಕಡೆಗೆ ಸೀಗಡಿ ಮೇಲೆ ಟ್ಯಾಕ್ಸ್ ತೆಗೆಯಬೇಕೆಂಬ ಹೋರಾಟದ